ಶಿವಮೊಗ್ಗದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವುದು

4156 (4601) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಕಬ್ಬು ಬೆಳೆಗಾರರ ಪುನಶ್ಚೇತನಕ್ಕಾಗಿ ಹೊಸದಾಗಿ ಖಾಸಗಿ ಅಥವಾ ಸರ್ಕಾರಿ ಒಡೆತನದ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಲಿ ಇರುವ ಮುಚ್ಚಿರುವ ದೇವಿ ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ. ಈ ಕಾರ್ಖಾನೆಗೆ ಗುತ್ತಿಗೆ ನೀಡಿರುವ ಸರ್ಕಾರಿ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿದೆಯೇ (ವಿವರ ನೀಡುವುದು)

ಇ) ಮುಚ್ಚಿರುವ ಶಿವಮೊಗ್ಗ ಸಕ್ಕರೆ ಕಾರ್ಖಾನೆ ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಈ) ಕಾರ್ಮಿಕರಿಗೆ ಹಾಗೂ ಕಬ್ಬು ಬೆಳೆಗಾರರಿಗೆ ಮೇಲ್ಕಂಡ ಕಂಪನಿಯಿಂದ ಬರಬೇಕಾಗಿರುವ ಬಾಕಿ ವಸೂಲಾತಿ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಉ) ಶಿವಮೊಗ್ಗ ತಾ: ವ್ಯಾಪ್ತಿಯ ಕಬ್ಬು ಬೆಳೆಗಾರರ ಕಬ್ಬನ್ನು ಭದ್ರಾವತಿ ಎಂ.ಪಿ.ಎಂ. ಕಾರ್ಖಾನೆಗೆ ಮಾರಾಟ ಮಾಡಲು ಅನುಮತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು).

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಶಿವಮೊಗ್ಗ-ಭದ್ರಾವತಿ ಅವಳಿ ನಗರ ವ್ಯಾಪ್ತಿಯಲ್ಲಿ ಪ್ರಸ್ತುತ ಸಾರ್ವಜನಿಕ ವಲಯದಲ್ಲಿ ಒಂದು ಸಕ್ಕರೆ ಕಾರ್ಖಾನೆ ಕಾರ್ಯ ನಿರ್ವಹಿಸುತ್ತಿದ್ದು, ಶಿವಮೊಗ್ಗ ನಗರದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಯೋಜನೆ ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ದೇವಿ ಶುಗರ್ಸ್ ಕಂಪನಿ ಪುನಶ್ಚೇತನಕ್ಕೆ ಸರ್ಕಾರದ ಮುಂದೆ ಯಾವುದೆ ಪ್ರಸ್ತಾವನೆ ಸಧ್ಯಕ್ಕೆ ಇರುವುದಿಲ್ಲ. ಈ ಕಾರ್ಖಾನೆಗೆ ಗುತ್ತಿಗೆ ನೀಡಿರುವ ಭೂಮಿಯನ್ನು ಲೀಜ್ ಅವಧಿಯ ನಂತರ ಹಿಂದಕ್ಕೆ ಪಡೆಯಲಾಗಿದೆ. ವಿವರ ಕೆಳಗಿನಂತಿದೆ.

ಕ್ರ.ಸಂ.	ಗ್ರಾಮದ ಹೆಸರು	ಸರ್ವೆ ನಂ	ವಿಸ್ತೀರ್ಣ ಎಕರೆಗಳಲ್ಲಿ
1.	ಮಳಲಿ, ತರೀಕೆರೆ ತಾ:	2ಪಿ	354.00
2.	ಚನ್ನಪಳ್ಳಿ	3ಪಿ	340.00
3.	ಹೆಚ್. ರಂಗಪುರ "	12ಪಿ	150.00
4.	ಕಾರೇಹಳ್ಳಿ ಭದ್ರಾವತಿ ತಾ:	8	225.00
		22	32.11
5.	ಹಸುಡಿ, ಶಿವಮೊಗ್ಗ ತಾ:	135	252.00
6.	ಹಾಲೇಕಳವಳ್ಳಿ	22:36	150.00
			1503.11

ಇ) ಸದರಿ ಕಾರ್ಖಾನೆಯನ್ನು ಪುನಶ್ಚೇತನ ಮಾಡುವ ಪ್ರಸ್ತಾವನೆಯು ಸಧ್ಯಕ್ಕೆ ಸರ್ಕಾರದ ಮುಂದೆ ಇಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸಲಾರದು.

ಈ) ಸರ್ಕಾರವು ಆದೇಶ ಕ್ರಮಾಂಕ: ಸಿಐ:168:ಎಸ್‌ಜಿಎಫ್:98 ದಿ: 02.08.1999 ಮತ್ತು ಕ್ರ:ಸಿಐ:203:ಎಸ್‌ಜಿಎಫ್:95(ಪಿ) ದಿ: 31.03.1999 ರನ್ವಯ ಕಬ್ಬು ಬೆಳೆಗಾರರಿಗೆ ಮತ್ತು ಕಾರ್ಮಿಕರಿಗೆ ಪಾವತಿಸಲು ಬಾಕಿ ಇರುವುದನ್ನು ಕಾರ್ಖಾನೆಯಲ್ಲಿದ್ದ ಸಕ್ಕರೆ ಮಾರಾಟದಿಂದ ಬಂದ ಹಣದಲ್ಲಿ ಬರಿಸಲು ಆದೇಶವಾಗಿದ್ದು, ಅದರಂತೆ ಕ್ರಮವಿಡಲಾಗಿದೆ ಕಾರ್ಮಿಕರಿಗೆ ರೂ. 118.36 ಲಕ್ಷ ಮತ್ತು ಕಬ್ಬು ಬೆಳೆಗಾರರಿಗೆ ರೂ. 105.09 ಲಕ್ಷ ಇದುವರೆಗೆ ಪಾವತಿಸಲಾಗಿದೆ.

ಉ) ಸರ್ಕಾರದ ಅಧಿಸೂಚನೆ ಕ್ರ:ಸಿಐ:138:ಎಸ್‌ಜಿಎಫ್:97: ದಿ: 02.09.98 ರಂತೆ ಶಿವಮೊಗ್ಗ, ಭದ್ರಾವತಿ ತಾಲ್ಲೂಕ್ ವ್ಯಾಪ್ತಿಯ ಗ್ರಾಮದ ಕಬ್ಬು ಬೆಳಗಾರರು ತಾತ್ಕಾಲಿಕವಾಗಿ ಕಬ್ಬನ್ನು ಭದ್ರಾವತಿಯ ಎಂ.ಪಿ.ಎಂ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಲು ಅನುಮತಿಸಲಾಗಿದೆ.

ಶಿವಮೊಗ್ಗದಲ್ಲಿ ಸ್ಥಗಿತಗೊಂಡಿರುವ ಸಣ್ಣ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಬಗ್ಗೆ

4157 (4602) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ಸಣ್ಣ ಕೈಗಾರಿಕೆಗಳು ಎಷ್ಟು ಇವೆ?

ಆ) ಇವುಗಳಲ್ಲಿ ಸ್ಥಗಿತ ಗೊಂಡಿರುವ ಸಣ್ಣ ಕೈಗಾರಿಕೆಗಳೆಷ್ಟು;

ಇ) ಇವುಗಳ ಪುನಶ್ಚೇತನಕ್ಕೆ ಸರ್ಕಾರ ಏನಾದರು ಅನುದಾನವನ್ನು ಬಿಡುಗಡೆ ಮಾಡಿದೆಯೆ: (ವಿವರ ನೀಡುವುದು)

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು)

ಅ) 11,173

ಆ) 1,212

ಇ) ರಾಜ್ಯ ಹೊಸ ಕೈಗಾರಿಕಾ ನೀತಿ 2001–06ರನ್ವಯ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಕೆಲವೊಂದು ರಿಯಾಯಿತಿ/ಸೌಲಭ್ಯಗಳನ್ನು ಘೋಷಿಸಲಾಗಿದೆ. ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನ ಕಾರ್ಯಕ್ರಮದ ನೀತಿಯನ್ವಯ ರೋಗಗ್ರಸ್ಥ ಕೈಗಾರಿಕೆಗಳಿಗೆ ಕೆಲವು ರಿಯಾಯಿತಿ ಹಾಗೂ ಪರಿಹಾರ ನೀಡಲಾಗುವುದು. ಶಿವಮೊಗ್ಗ ಜಿಲ್ಲೆಯಲ್ಲಿ 15 ರೋಗಗ್ರಸ್ಥ ಕೈಗಾರಿಕೆಗಳಿಗೆ ರೂ. 9.785 ಲಕ್ಷ ಬೀಜಧನ ಸಾಲ ನೀಡಿ ಪುನಶ್ಚೇತನಗೊಳಿಸಲಾಗಿದೆ.

ಶಿವಮೊಗ್ಗದ ಕೆ.ಎಂ.ಎಫ್.ನ ಆದಾಯ

4158 (4603) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಧಾರವಾಡ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಕೆ.ಎಂ.ಎಫ್.ನಲ್ಲಿ ಪ್ರತಿ ತಿಂಗಳೂ ಸಂಗ್ರಹ ಮಾಡುವ ಹಾಲು ಎಷ್ಟು: ಇದರ ಆದಾಯವೆಷ್ಟು:

ಆ) ಸಂಗ್ರಹಿಸಲು ಖರ್ಚುಮಾಡುವ ಹಣವೆಷ್ಟು

ಇ) ಈ ಫೆಡರೇಷನ್ ಲಾಭದಲ್ಲಿ ನಡೆಯುತ್ತಿದೆಯೇ ಅಥವಾ ನಷ್ಟದಲ್ಲಿ ನಡೆಯುತ್ತಿದೆಯೇ:

ಈ) ನಷ್ಟದಲ್ಲಿ ನಡೆಯುತ್ತಿದ್ದರೆ ಸರ್ಕಾರವು ಈ ನಷ್ಟವನ್ನು ಸರಿಪಡಿಸಲು ಯಾವ ಕ್ರಮ ಕೈಗೊಂಡಿದೆ.

ಉ) ಲಾಭದಲ್ಲಿ ನಡೆಯುತ್ತಿದ್ದರೆ ಹಾಲಿನ ದರವನ್ನು ಹೆಚ್ಚಿಸುವ ಅವಶ್ಯಕತೆ ಇದೆಯೆ: (ಅಂಕಿ ಅಂಶಗಳನ್ನು ದಿನಾಂಕ: 1.4.2002 ರಿಂದ 31.3.2003ರ ವರೆಗೆ ನೀಡುವುದು)